ಶಕ್ತರಾಗಬಹುದು. ಪ್ರಾಯಶಃ ಅನಾದಿಕಾಲದಿಂದ ನಡೆದು ಬಂದಿರುವ ಘಟನೆಗಳು ಒಂದರ ಹಿಂದೆ ಒಂದರಂತೆ ತೆರೆದುಕೊಳ್ಳಲಾರಂಭಿಸಬಹುದು. ಈ ನಾಲಗೆಯ ಅಂಚಿನಲ್ಲಿ ಯಾರಾದರೂ ಟ್ಯೂನ್ ಇನ್ ಮಾಡುವ ದಾರಿಯನ್ನು ಕಾಯುತ್ತಾ ಅದು ಅಡಗಿಕೊಂಡಿರಬಹುದು...

ಇಡೀ ಬದುಕು ಯಾವುದೇ ಸಂಕೇತ ಕರೆಯಿಲ್ಲದೆ ಇಲ್ಲವಾಗುವುದೆಂದರೆ ವ್ಯರ್ಥವೇ. ಇಲ್ಲವಾಗುವುದೆಂದರೆ ಏನು? ನಮ್ಮ ದೃಷ್ಟಿಯಲ್ಲಿ ಬೀಳುವುದಿಲ್ಲ ಎಂದು ಅಷ್ಟೇ. ಆದರೆ ಅದು ಎಲ್ಲಿಯಾದರೂ ಅದೃಶ್ಯ ರೂಪದಲ್ಲಿ ಇದ್ದೇ ಇರುತ್ತದೆ. ಅಲ್ಲ, ಅದು ಇರಲೇಬೇಕು. ನಿರ್ಮಲ ಕೂಡ ಎಲ್ಲಿಯೂ ಇರಬಹುದು. ಹೀಗಿನದು ಏನಾದರೂ ಚಾರುವಿನಲ್ಲಿ ಹೇಳಿದರೆ ಅವಳು ನಗಲಾರಂಭಿಸುತ್ತಾಳೆ.

'...ಸರ್, ಯಾವ ಪ್ರಶ್ನೆಗೆ ಉತ್ತರವಿಲ್ಲವೋ, ಆ ಪ್ರಶ್ನೆಯನ್ನು ಕೇಳುವುದರಲ್ಲಿ ಏನು ಅರ್ಥವಿದೆ?'

'ಚಾರೂ, ಎಲ್ಲಾ ಪ್ರಶ್ನೆಗಳಿಗೆ ಉತ್ತರ ಇರುವುದಿಲ್ಲ, ಹಾಗಿದ್ದರೂ ಅಂತಿಮ ಪ್ರಶ್ನೆ ಇದು ಕೇಳಲೇಬೇಕಾಗುತ್ತದೆ ಅಲ್ಲವೇ?'

ಇದಕ್ಕೆ ಚಾರೂ ಏನೂ ಹೇಳುವುದಿಲ್ಲ. ಆದರೆ ಅವಳಿಗೆ ಈ ವಿಧದ ಮಾತುಕತೆ ಹುಚ್ಚುತನವಾಗಿ ಕಾಣುತ್ತದೆ.

ಒಬ್ಬ ವ್ಯಕ್ತಿ ಅವರ ಮನೆಯ ಮುಂದಿನ ರಸ್ತೆಯ ಮೂಲೆಯಲ್ಲಿ ನಿಂತುಕೊಂಡು ಇಡೀ ದಿನ ಮಾತನಾಡುತ್ತಾ ಇರುತ್ತಾನೆ. ಒಳ್ಳೆಯ ಮನೆತನದವನಾಗಿರುವ ಈ ಮನುಷ್ಯ ವಿದ್ಯೆ ಬುದ್ಧಿಯುಳ್ಳವನು; ಅವನಿಗೆ ಮದುವೆಯೂ ಆಗಿದೆ. ಎಲ್ಲಿಯೋ ಒಂದು ಕ್ಷಣ ಭೂಕಂಪವಾದ ರೀತಿ ಅವನು ಏಕದಂ ಬದಲಾಗಿ ಹೋದ. ಅವನಿಗೆ ತಂದೆತಾಯಿ, ತಮ್ಮತಂಗಿ, ಹೆಂಡತಿ ಎಲ್ಲರೂ ಇದ್ದಾರೆ. ಆದರೆ ಅವನು ಮಾತ್ರ ಯಾರ ಮಾತೂ ಕೇಳುವುದಿಲ್ಲ. ಬೆಳಗ್ಗೆಯಾದೊಡನೆ ಕಚೇರಿಗೆ ಹೊರಟು ಬರುವವನಂತೆ ಮೂಲೆಗೆ ಬಂದು ನಿಂತುಕೊಳ್ಳುತ್ತಾನೆ, ಮಾತು ಪ್ರಾರಂಭಿಸುತ್ತಾನೆ.

ಹಾಗೆ ನೋಡುವುದಾದರೆ, ಅವನು ಮಾತನಾಡುವುದರಲ್ಲಿಯೂ ಬೇಕಾದಷ್ಟು ತತ್ವ ಇದೆ. ಆದರೆ ಜನರಿಗೆ ಅದನ್ನು ಕೇಳುವುದಕ್ಕೆ ಸಮಯವಿಲ್ಲ. ಅದಲ್ಲದೆ ಆದರ್ಶವಾದ, ಧ್ಯೇಯ ನೀತಿ ಮೌಲ್ಯಗಳು ಈ ವಿಧದ ವಿಷಯಗಳಲ್ಲಿ ಜನರಿಗೆ ಅಭಿರುಚಿ ಇಲ್ಲ. ಇವನ ದೋಷ, ಅವನ ಸಂವೇದನೆಯನ್ನು ಎತ್ತಿ ಯಾರಾದರೂ ಮಾತನಾಡಿದರೆ ಜನರು ಸಮಯವನ್ನು ಹುಡುಕಿಕೊಂಡು ಆಸಕ್ತಿಯಿಂದ ಕೇಳುತ್ತಾರೆ. ಹಾಗಿರುವಾಗ ಆ ಮೂಲೆ ಮನುಷ್ಯ ಏನು ಮಾಡಿಯಾನು? ಜನರು ಕೇಳುವುದಿಲ್ಲವೆಂದು ಸುಮ್ಮನಿರುವನೇ. ಅದು ಸಾಧ್ಯವೇ ಇಲ್ಲ. ನೀವು ಕೇಳಿ ಅಥವಾ ಕೇಳದೇ ಇರಿ ಅವನು ಮಾತನಾಡುತ್ತಾ ಇರುತ್ತಾನೆ.

ಅವನು ಮಾತನಾಡುವುದು ತನ್ನೊಂದಿಗೆ... ಗಾಳಿಯೊಂದಿಗೆ... ಬೆಳಕಿನೊಂದಿಗೆ... ಪ್ರತಿಯೊಬ್ಬರಲ್ಲಿಯೂ ಹೇಳಲು ಏನಾದರೂ ಇದ್ದೇ ಇರುತ್ತದೆ. ಅದನ್ನು ಯಾರಿಗಾದರೂ ಹೇಳಬೇಕೆಂದು ಕಾಣುವುದು ಹುಚ್ಚುತನವೇ? ಅಲ್ಲ. ಆದರೆ ಜನರು ಅವನನ್ನು ಹುಚ್ಚನೆಂದು ಹೇಳುತ್ತಾರೆ.

ಅವರು ವರಾಂಡದಿಂದ ಮನೆಯೊಳಗೆ ಬಂದರು. ಇತ್ತೀಚೆಗೆ ನಾನು ಕೂಡ ಒಬ್ಬನೇ ಮಾತನಾಡಿಕೊಳ್ಳುತ್ತಿರುತ್ತೇನೆ ಎಂದು ಜನ ನನ್ನಲ್ಲಿ ಹೇಳುತ್ತಾರೆ. ಚಾರು ಕೂಡ ಅದನ್ನೇ